




## ಪ್ಯಾನಸೋನಿಕ್ ಏರ್ ಕಂಡೀಷನರ್

ತಂತ್ರಜ್ಞಾನ, ಆವಿಷ್ಕಾರ ಮತ್ತು ವಿನ್ಯಾಸದಲ್ಲಿ ಮುಂಚೂಣಿಯಲ್ಲಿರುವ ಪ್ಯಾನಸೋನಿಕ್ ಇಂಡಿಯಾ ಲಿಮಿಟೆಡ್ ರೇಡಿಯೆಂಟ್ ಕೂಲಿಂಗ್ ತಂತ್ರಜ್ಞಾನ ಹೊಂದಿದ ಏರ್ ಕಂಡೀಷನರ್ ಅನ್ನು ಬಿಡುಗಡೆ ಮಾಡಿದೆ.

ಇದು ಸ್ವೈವಿಂಗ್ ಫ್ಲಾಪ್ ಡಿಸೈನ್ ಹೊಂದಿದ್ದು ಸಮಾನ ತಂಪಾಗಿಸುವಿಕೆಯ ಗಾಳಿಯ ಹರಿವು ನೀಡುತ್ತದೆ. ಸ್ವೈವಿಂಗ್ ಮೂರು ಮಲ್ಟಿಡೈರೆಕ್ಷನಲ್ ಆಮರ್ ನೆರವಿನೊಂದಿಗೆ ಗಾಳಿಯ ವಿವಿಧ ತಣ್ಣನೆಯ ಆಯ್ಕೆಗಳಾದ ರೇಡಿಯೆಂಟ್ ಕೂಲಿಂಗ್ ಮತ್ತು ಫಾಸ್ಟ್ ಕೂಲಿಂಗ್ ಸಾಧಿಸುತ್ತದೆ. ಎಲೈಟ್ ಇನ್ವರ್ಟರ್ ಶ್ರೇಣಿ 1 ಮತ್ತು 1.5 ಟನ್ ಸಾಮರ್ಥ್ಯದಲ್ಲಿ ಕ್ರಮವಾಗಿ 70,200 ರೂಪಾಯಿ ಹಾಗೂ 85,200 ರೂಪಾಯಿ.

ರೇಡಿಯೆಂಟ್ ಕೂಲಿಂಗ್‌ನಿಂದ ತಣ್ಣನೆಯ ಗಾಳಿ ಸಹಜವಾಗಿ ಸಂಚರಿಸಿ ಇಡೀ ಕೋಣೆ ಮತ್ತು ಗೋಡೆಗಳ ಕೆಳಗೆ ಇಳಿಯುವ ಮೂಲಕ ಎಲ್ಲ ಕಡೆಯೂ ತಂಪಾಗಿಸುತ್ತದೆ. ಈ ವಿನೂತನ ಕೂಲಿಂಗ್ ಸಿಸ್ಟಂ 'ಕೋಂಡಾ ಎಫೆಕ್ಟ್' ತತ್ವವನ್ನು ಬಳಸುವ ಮೂಲಕ ತಾರಸಿ ಮತ್ತು ಗೋಡೆಗಳ ಬಿಸಿಯನ್ನು ನಿವಾರಿಸಿ ತಣ್ಣಗಾಗಿಸುತ್ತದೆ ಎಂಬುದು ಕಂಪೆನಿ ವಿವರಣೆ. ಮಾಹಿತಿಗೆ: 91– 9650111769 ಹಾಗೂ 91 9999090098

## ಎವಾನ್ ಲಿಪ್‌ಸ್ಟಿಕ್




ಸೌಂದರ್ಯವರ್ಧಕ ಕಂಪೆನಿ ಎವಾನ್ ಹೊಸ ಶ್ರೇಣಿಯ 'ಎವಾನ್ ಟ್ರು' ಎಂಬ ಲಿಪ್‌ಸ್ಟಿಕ್ ಅನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಟ್ರು ಕಲರ್ ಲಾಕ್ ತಂತ್ರಜ್ಞಾನವನ್ನು ಒಳಗೊಂಡಿರುವ ಈ ಲಿಪ್‌ಸ್ಟಿಕ್ ಪಿಗ್‌ಮೆಂಟ್ ಅನ್ನು ಹೊಂದಿದ್ದು, ಇದು ದೀರ್ಘಕಾಲ ಬಾಳಿಕೆ ಬರುತ್ತದೆ. ಇದೇ ಶ್ರೇಣಿಯಲ್ಲಿ ಮಸ್ಕರಾ, ಕಾಡಿಗೆ, ನೇಲ್ ಪಾಲಿಷ್, ಫೌಂಡೇಷನ್, ಐ ಶ್ಯಾಡೊ ಮುಂತಾದ ಉತ್ಪನ್ನಗಳೂ ಇವೆ.

ಬೆಲೆ, ಲಭ್ಯತೆ ಮತ್ತಿತರ ಮಾಹಿತಿಗೆ 9873688601/9873688601

## ವಾಲ್ಡ್‌ಮನ್ ಐಷಾರಾಮಿ ಪೆನ್



ಲಿವ್ವೆಕ್ ಇಂಡಿಯಾ ಕಂಪೆನಿ ವಾಲ್ಡ್‌ಮನ್ ಪೆನ್‌ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಜರ್ಮನಿಯ ಐಷಾರಾಮಿ ಬರವಣಿಗೆ ಸಾಧನಗಳ ಈ ಸಂಗ್ರಹವು ಉತ್ತಮ ಗುಣಮಟ್ಟದ ಪೆನ್‌ಗಳನ್ನು ನೀಡುತ್ತಿದೆ. ಜರ್ಮನ್ ಸಿಲ್ವರ್‌ನಿಂದ ತಯಾರಿಸಲಾಗಿದ್ದು, ವಿನ್ಯಾಸದಲ್ಲಿ ಗ್ಲಾಮರ್ ಟಚ್ ಇದೆ ಎಂಬುದು ಕಂಪೆನಿ ವಿವರಣೆ. ಬೆಲೆ 49,999 ರೂಪಾಯಿಗಳಿಂದ 99,999 ರೂಪಾಯಿ.

ಮಾಹಿತಿಗೆ: 72595 79122 / 77952 13926




## ಪಾಸ್ ಪಾಸ್ ಪಲ್ಸ್ ಕ್ಯಾಂಡಿ

ಪಾಸ್ ಪಾಸ್ ಪಲ್ಸ್ ಆರೆಂಜ್ ಫ್ಲೇವರ್‌ನ ಕ್ಯಾಂಡಿ ಅನ್ನು ಬಿಡುಗಡೆ ಮಾಡಿದೆ. ಪಲ್ಸ್ ಆರೆಂಜ್‌ನ ಮಧ್ಯಭಾಗದಲ್ಲಿ ಸುವಾಸನೆಭರಿತವಾದ ಪುಡಿ ಕಿತ್ತಳೆ ಹಣ್ಣಿನ ಮೋಹಕವಾದ ರುಚಿಯ ಅನುಭವವನ್ನು ನೀಡಲಿದೆ. ಈ ಹೊಸ ಕ್ಯಾಂಡಿ ಮಕ್ಕಳು ಇಷ್ಟಪಡುವ ಕ್ಯಾಂಡಿಯಾಗಿದೆ.

ಬಾಯಿಗಿಟ್ಟ ತಕ್ಷಣ ಕ್ಯಾಂಡಿಯ ಮೇಲ್ಪದರ ಕಿತ್ತಳೆ ಹಣ್ಣಿನ ರುಚಿಯನ್ನು ಕೊಡಲಿದ್ದು, ನಂತರ ಅದರ ಒಳಭಾಗದಲ್ಲಿರುವ ಸುವಾಸಿತ ಪುಡಿ ಆಶ್ಚರ್ಯಕರವಾದ ಕ್ಯಾಂಡಿಯ ಅನುಭವವನ್ನು ನೀಡಲಿದೆ. ಈ ಪಾಸ್ ಪಾಸ್ ಪಲ್ಸ್ ಆರೆಂಜ್ ಸುವಾಸಿತ ಮಸಾಲೆಯೊಂದಿಗೆ ಕಿತ್ತಳೆ ಹಣ್ಣು ತಿಂದಷ್ಟೇ ಮಜಾ ನೀಡಲಿದೆ ಎಂಬುದು ಕಂಪೆನಿ ವಿವರಣೆ.

ವಿವರಕ್ಕೆ: 9742458630

## ಕಿಲ್ಲರ್ ಜೀನೋಸ್ ಹೊಸ ಉಡುಗೆ

ಮುಂಚೂಣಿಯ ಉಡುಗೆ ಬ್ರ್ಯಾಂಡ್ ಕಿಲ್ಲರ್ ಜೀನ್ಸ್ ದೇಸಿ ಲೇಬಲ್‌ನ ಕಿಲ್ಲರ್ ಜೀನೋಸ್ ಉಡುಗೆಗಳನ್ನು ಪರಿಚಯಿಸಿದೆ.

ಕಿಲ್ಲರ್ ಜೀನೋಸ್, ಜೀನ್ಸ್ ಮತ್ತು ಚಿನೋಸ್ ಮಾದರಿಗಳ ಹೈಬ್ರಿಡ್ ಸಮ್ಮಿಲನವಾಗಿದ್ದು ಯುವ ಸಮೂಹವನ್ನು ಮೋಡಿ ಮಾಡಲಿದೆ ಎಂಬ ವಿಶ್ವಾಸ ಹೊಂದಿದೆ. ಜೀನ್ಸ್ ಮತ್ತು ಚಿನೋಸ್ ಪದಗಳನ್ನು ಬಳಸಿ ಜೀನೋಸ್ ಹೆಸರನ್ನು ಇದಕ್ಕೆ ಇಡಲಾಗಿದೆ ಎಂದು ಕಂಪೆನಿ ಹೇಳಿದೆ.

ಜೀನೋಸ್ ಅತ್ಯಾಧುನಿಕ ಡೆನಿಂ ಶ್ರೇಣಿಯಾಗಿದ್ದು, ವಿವಿಧ ಬಣ್ಣಗಳಲ್ಲಿ ಲಭ್ಯವಿದೆ. ಇತರೆ ಬ್ರಾಂಡ್‌ನ ಡೆನಿಂ ಮಾರುಕಟ್ಟೆಯಲ್ಲಿ ನೀಲಿ ಮತ್ತು ಕಪ್ಪು ಬಣ್ಣಗಳು ಬಹಳ ಜನಪ್ರಿಯವಾಗಿದೆ. ಆದರೆ ಯುವಕರು ತಮ್ಮ ವರ್ಣಮಯ ರೂಪವನ್ನು ಪ್ರದರ್ಶಿಸಲು ಸಾಧ್ಯವಾಗುವಂತೆ ಕಿಲ್ಲರ್ ಕೆಲವು ಆಕರ್ಷಕ ಬಣ್ಣಗಳನ್ನು ಪರಿಚಯಿಸಿದೆ. ಆಫ್ಟರ್ ಡಾರ್ಕರ್, ಚಾಕೊಲೇಟ್, ಡಾರ್ಕರ್ ಗ್ರೇ, ಖಾಕಿ, ನೇವಿ, ಓಲಿವ್, ಸ್ಲೇಟ್ ಗ್ರೇ ಮತ್ತು ಟೊಬಾಕ್ಕೊ ಹೀಗೆ ಎಂಟು ಆಕರ್ಷಕ ಬಣ್ಣಗಳಲ್ಲಿ ಕಿಲ್ಲರ್ ಜೀನೋಸ್ ಲಭ್ಯ.

ಮಾಹಿತಿಗೆ: 9448902288

